ಕೋಲಾರ ಜಿಲ್ಲೆಯಲ್ಲಿ ಶಿಕ್ಷಕರುಗಳ ಕೊರತೆ

೨೦೯. ಶ್ರೀ ಚೌಡಾರೆಡ್ಡಿ (ಚಿಂತಾಮಣಿ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆ ಚಿಂತಾಮಣಿ ತಾಲ್ಲೂಕು ಮತ್ತು ಬಾಗೇಪಲ್ಲಿ ತಾಲ್ಲೂಕಿನ ಚೇಲೂರು ಹೋಬಳಿಯಲ್ಲಿ ಶಿಕ್ಷಕರ ಕೊರತೆಯಿಂದಾಗಿ ಕೆಲವು ಪ್ರಾಥಮಿಕ ಶಾಲೆಗಳನ್ನು ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಶಿಕ್ಷಕರ ಕೊರತೆಗೆ ಕಾರಣಗಳು ?

ಇ) ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಲು ಇರುವ ನಿಯಮಗಳು ಯಾವುವು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಶಾಲೆಗಳನ್ನು ಮುಚ್ಚಿರುವುದಿಲ್ಲ.

ಆ) ಆರ್ಥಿಕ ಮಿತವ್ಯಯದ ಕಾರಣ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗಿಲ್ಲ.

ಇ) ೫೦ ಮಕ್ಕಳಿಗೆ ಒಬ್ಬರಂತೆ ಶಿಕ್ಷಕರ ಹುದ್ದೆಯನ್ನು ಮಂಜೂರು ಮಾಡಲಾಗುವುದು.

ಖಾಸಗಿ ಶಾಲೆಯವರಿಂದ ವಂತಿಕೆಯ ವಸೂಲಾತಿ

೩೧೪. ಶ್ರೀ ರಾಮಲಿಂಗರೆಡ್ಡಿ (ಜಯನಗರ).—ಮಾನ್ಯ ಶಿಕ್ಷಣ ಯುವಜನ ವ್ಯವಹಾರಗಳು, ಕ್ರೀಡೆಗಳು ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಖಾಸಗಿ ಶಾಲೆಗಳಲ್ಲಿ ದುಬಾರಿಯಾದ ದೇಣಿಗೆ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳೇನು ?

ಇ) ಸರ್ಕಾರದಿಂದ ಮಾನ್ಯತೆ ಪಡೆಯದಿರುವ ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಇಂತಹ ಸಂಸ್ಥೆಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ಸರ್ಕಾರಿ ಬೀಜೋತ್ಪಾದನಾ ಕೇಂದ್ರಗಳ ಬಗ್ಗೆ

೩೧೫. ಶ್ರೀ ಎಲ್. ಆರ್ ಶಿವರಾಮೇಗೌಡ (ನಾಗಮಂಗಲ).—ಮಾನ್ಯ ವ್ಯವಸಾಯ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸರ್ಕಾರಿ ಬೀಜೋತ್ಪಾದನಾ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಪ್ರತಿಯೊಂದು ಕೇಂದ್ರಗಳಲ್ಲಿ ಉತ್ಪಾದಿಸುತ್ತಿರುವ ಸುಧಾರಿತ ಬೀಜಗಳ ವಿವರಗಳೇನು ?

ಇ) ರಾಜ್ಯದ ರೈತರುಗಳಿಗೆ ಬೇಕಾಗುವ ಬೀಜಗಳನ್ನು ದೊರಕಿಸಿಕೊಡುವಲ್ಲಿ ಸರ್ಕಾರದವರು ಪ್ರಸಕ್ತ ಸಾಲಿನಲ್ಲಿ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು)

ಅ) ಈ ಮೊದಲು ಕೃಷಿ ಇಲಾಖೆಯಡಿಯಲ್ಲಿ ಒಟ್ಟು ೬೨ ಬೀಜೋತ್ಪಾದನಾ ಕೇಂದ್ರಗಳಿದ್ದವು, ೩೦ ಕೇಂದ್ರಗಳನ್ನು ಜಿಲ್ಲಾ ಪರಿಷತ್ತು, ಬೆಂಗಳೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಗಳು